ಇ)

ಮತಕ್ಷೇತ್ರ	ವಿದ್ಯುತ್ ಸಂಪರ್ಕ ಕಲ್ಪಿಸಲಾದ ಸಂಖ್ಯೆ	
	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ
ಔರಾದ್	61	10
ಬಸವಕಲ್ಯಾಣ	45	30
ಭಾಲ್ಕಿ	44	38
ಬೀದರ್	41	13
ಬೀದರ್ ದಕ್ಷಿಣ	42	29
ಹುಮನಾಬಾದ್	34	44
ಒಟ್ಟು	**267**	**164**

ಈ) 2013–14ನೇ ಸಾಲಿನ ಶೇ. 25ರಷ್ಟು ಕೊಳವೆಬಾವಿ ಕೊರೆಯಲು ಕಾರ್ಯಾದೇಶ ನೀಡಿದ್ದು, 50 ಕೊಳವೆಬಾವಿಗಳನ್ನು ಕೊರೆಯಲಾಗಿದೆ. ಬಾಕಿ ಉಳಿದ ಶೇ.75ರಷ್ಟು ಕೊಳವೆಬಾವಿಗಳು ಮತ್ತು 2014–15ನೇ ಸಾಲಿನ ಕೊಳವೆಬಾವಿಗಳನ್ನು ಕೊರೆಯಲು ಟೆಂಡರ್ ಕರೆಯಲಾಗಿದೆ. ಗುತ್ತಿಗೆದಾರರು ಟೆಂಡರ್‌ಗೆ ಮಧ್ಯಂತರ ತಡೆಯಾಜ್ಞೆ ತಂದಿರುತ್ತಾರೆ. ತಡೆಯಾಜ್ಞೆ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ತಡೆಯಾಜ್ಞೆ ತೆರವುಗೊಳಿಸಿದ ನಂತರ ಕೊಳವೆಬಾವಿ ಕೊರೆಯಲು ಕ್ರಮ ಕೈಗೊಳ್ಳಲಾಗುವುದು.

ಡಾ॥ ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣ

2683 (3668); ಶ್ರೀ ಗೋಪಾಲ ಪೂಜಾರಿ. ಕೆ (ಬೈಂದೂರು)

ಅ) ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕು ಬೈಂದೂರಿನಲ್ಲಿ ನಿರ್ಮಾಣವಾಗುತ್ತಿರುವ ಡಾ॥ ಬಿ.ಆರ್.ಅಂಬೇಡ್ಕರ್ ಭವನದ ಕಾಮಗಾರಿ ಪ್ರಗತಿ ಯಾವ ಹಂತದಲ್ಲಿದೆ;

ಆ) ಕಾಮಗಾರಿ ಅನುಷ್ಠಾನ ವಿಳಂಬವಾಗಿರುವುದಕ್ಕೆ ಕಾರಣಗಳೇನು;

ಇ) ಹಾಗಿದ್ದಲ್ಲಿ, ಈ ಕಾಮಗಾರಿಗಾಗಿ ಬಿಡುಗಡೆಯಾದ, ಖರ್ಚಾದ ಅನುದಾನವೆಷ್ಟು;

ಈ) ಕಾಮಗಾರಿ ಸಾಕಷ್ಟು ಪ್ರಗತಿ ಸಾಧಿಸಿದ್ದರೂ ಕೂಡ ಇನ್ನೂ ಎರಡನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡದೇ ಇರಲು ಕಾರಣಗಳೇನು?

ಉ) ಕಾಮಗಾರಿಯನ್ನು ಶೀಘ್ರವಾಗಿ ಸಂಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ಉಡುಪಿ ಜಿಲ್ಲೆ, ಕುಂದಾಪುರ ತಾಲ್ಲೂಕು ಬೈಂದೂರಿನಲ್ಲಿ ನಿರ್ಮಾಣವಾಗುತ್ತಿರುವ ಡಾ॥ ಬಿ.ಆರ್.ಅಂಬೇಡ್ಕರ್ ಭವನದ ಆರ್.ಸಿ.ಸಿ. ಕಾಮಗಾರಿಯು ಮುಗಿದಿದ್ದು, ಪ್ಲಾಸ್ಟರಿಂಗ್ ಮತ್ತು ವುಡ್ ವರ್ಕ್ ಕೆಲಸ ಬಾಕಿ ಇರುತ್ತದೆ.

ಆ) 2012–13 ನೇ ಸಾಲಿನಲ್ಲಿ ಸದರಿ ಭವನದ ಮುಂದುವರೆದ ಕಾಮಗಾರಿಗಾಗಿ ₹ 50.00 ಲಕ್ಷಗಳು ಮಂಜೂರಾತಿ ನೀಡಿ, ಮೊದಲನೆಯ ಕಂತಾಗಿ ₹ 25.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಉಡುಪಿ ಜಿಲ್ಲೆರವರಿಗೆ ಬಿಡುಗಡೆ ಮಾಡಲಾಗಿದೆ. ಬಿಡುಗಡೆಯಾದ ಅನುದಾನ ಖರ್ಚಾಗಿರುವ ಬಗ್ಗೆ ಹಣ ಬಳಕೆ ಪ್ರಮಾಣ ಪತ್ರ ಮತ್ತು ಭವನದ ಕಾಮಗಾರಿಯ ಛಾಯಾಚಿತ್ರಗಳ ಸೂಕ್ತ ದಾಖಲಾತಿಗಳನ್ನು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳಿಂದ ಪಡೆದು ಬಾಕಿ ಅನುದಾನ ಬಿಡುಗಡೆ ಮಾಡಲು ವಿಳಂಬವಾಗಿರುತ್ತದೆ.

ಇ) ಸದರಿ ಭವನದ ಮುಂದುವರೆದ ಕಾಮಗಾರಿಗಾಗಿ ಬಿಡುಗಡೆಯಾದ ₹ 25.00 ಲಕ್ಷಗಳು ಖರ್ಚಾಗಿರುತ್ತದೆ.

ಈ) ಮತ್ತು ಉ) ಸದರಿ ಭವನಕ್ಕೆ ಬಿಡುಗಡೆ ಮಾಡಲಾದ ಅನುದಾನವು ಖರ್ಚಾಗಿದ್ದು, ಬಾಕಿ ಅನುದಾನ ₹ 25.00 ಲಕ್ಷಗಳನ್ನು ಬಿಡುಗಡೆ ಮಾಡಲು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಉಡುಪಿ ಜಿಲ್ಲೆರವರಿಂದ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಅದರಂತೆ ಸದರಿ ಭವನದ ಕಾಮಗಾರಿಗೆ ಬಾಕಿ ಇರುವ ₹ 25.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ.

ಭವನದ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ರಾಜ್ಯದಲ್ಲಿ ನರ್ಸಗಳ ಕೊರತೆ

2685 (2296); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮೀ ಲೇಔಟ್)

ಅ) ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಖಾಸಗಿ ನರ್ಸಿಂಗ್ ಕಾಲೇಜುಗಳ ಸಂಖ್ಯೆ ಎಷ್ಟು;

ಆ) ಇವುಗಳಲ್ಲಿರುವ ಒಟ್ಟು ಸೀಟುಗಳೆಷ್ಟು;

ಇ) ರಾಜ್ಯದಲ್ಲಿನ ಆಸ್ಪತ್ರೆಗಳಲ್ಲಿ ನರ್ಸ್‌ಗಳ ಕೊರತೆ ಇದೆಯೇ;

ಈ) ಹೊರ ರಾಜ್ಯಗಳಿಂದ ಇಲ್ಲಿಗೆ ಬಂದು ನರ್ಸಿಂಗ್ ಶಿಕ್ಷಣ ಪಡೆದು ನೌಕರಿಗೆ ಸೇರುತ್ತಿರುವುದರಿಂದ ಸ್ಥಳೀಯ ಕನ್ನಡಿಗರಿಗೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ರಾಜ್ಯದಲ್ಲಿ ಹೆಚ್ಚು ನರ್ಸಿಂಗ್ ಕಾಲೇಜು, ಶಾಲೆಗಳನ್ನು ಪ್ರಾರಂಭಿಸಿ, ಕನ್ನಡಿಗರಿಗೆ ಸೀಟು ಮೀಸಲಾತಿಗೆ ಕ್ರಮ ಕೈಗೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಡಾ॥ ಶರಣಪ್ರಕಾಶ ಆರ್. ಪಾಟೀಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು)

ಅ) ರಾಜ್ಯದಲ್ಲಿ ಸರ್ಕಾರಿ 10 ನರ್ಸಿಂಗ್ ಕಾಲೇಜುಗಳಿರುತ್ತವೆ. ಉಳಿದಂತೆ ಸರ್ಕಾರದಿಂದ ಮಂಜೂರಾಗಿರುವ 342 ಖಾಸಗಿ ನರ್ಸಿಂಗ್